ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ನಂ.17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ ಬೆಂಗಳೂರು 560 001.
ದೂ. 080–22028032/34/ಫ್ಯಾಕ್ಸ್ 22028041

ದಿನಾಂಕ : 27–02–2015

# ಪತ್ರಿಕಾ ಪ್ರಕಟಣೆ

## ನಕ್ಷತ್ರ ವೀಕ್ಷಣೆ ಕಾರ್ಯಕ್ರಮ

**ಬೆಂಗಳೂರು, ಫೆಬ್ರವರಿ 27 (ಕರ್ನಾಟಕ ವಾರ್ತೆ)**

ಜವಾಹರ್‌ಲಾಲ್ ನೆಹರು ತಾರಾಲಯ ಹಾಗೂ ಬೆಂಗಳೂರು ಅಸೋಸಿಯೇಷನ್ ಫಾರ್ ಸೈನ್ಸ್ ಎಜುಕೇಷನ್ ವತಿಯಿಂದ ಮಾರ್ಚ್ 1 ರಂದು ಸಂಜೆ 6–30 ಗಂಟೆಗೆ ನಗರದ ಹೈ ಗ್ರಾಂಡ್ಸ್ ಬಳಿಯ ಶ್ರೀ ಟಿ. ಚೌಡಯ್ಯ ರಸ್ತೆಯಲ್ಲಿರುವ ಜವಾಹರ್‌ಲಾಲ್ ನೆಹರು ತಾರಾಲಯದಲ್ಲಿ "ನಕ್ಷತ್ರ ವೀಕ್ಷಣೆ" ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

ಹೆಚ್ಚಿನ ವಿವರಗಳಿಗೆ ದೂರವಾಣಿ ಸಂಖ್ಯೆ– 2237 9725/2226 6084 ಅಥವಾ http://www.taralaya.org/monthly-sky-chart.php ಅನ್ನು ಸಂಪರ್ಕಿಸಬಹುದಾಗಿದೆ ಎಂದು ಜವಾಹರ್‌ಲಾಲ್ ನೆಹರು ತಾರಾಲಯದ ಪ್ರಕಟಣೆ ತಿಳಿಸಿದೆ.

ಬಾಬು:ಜಿಪಿಆರ್.

## ನ್ಯಾ. ವೈದ್ಯನಾಥ ಆಯೋಗದ ವರದಿ

**ಬೆಂಗಳೂರು, ಫೆಬ್ರವರಿ 27 (ಕರ್ನಾಟಕ ವಾರ್ತೆ)**

ಬೆಂಗಳೂರಿನ ಸಿಟಿ ಸಿವಿಲ್ ನ್ಯಾಯಾಲಯದ ಆವರಣದಲ್ಲಿ 2012 ರ ಮಾರ್ಚ್ 2 ರಂದು ನಡೆದ ಗಲಭೆಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ನೇಮಿಸಿದ ನ್ಯಾಯಮೂರ್ತಿ ಆರ್. ಜಿ. ವೈದ್ಯನಾಥ ಏಕ ಸದಸ್ಯ ಆಯೋಗವು ಇಂದು ಮುಖ್ಯಮಂತ್ರಿಗಳಿಗೆ ತನ್ನ ವರದಿ ಸಲ್ಲಿಸಿತು ಎಂದು ಆಯೋಗದ ಕಾರ್ಯದರ್ಶಿ ಶ್ರೀ ಎಂ.ಜೆ. ಇಂದ್ರಕುಮಾರ್ ಅವರು ತಿಳಿಸಿದ್ದಾರೆ.

ಆಯೋಗದ ಮುಂದೆ ಅಡ್ವೋಕೇಟ್‌ಗಳಿಂದ 130 ಅಫಿಡವಿಟ್, ಪೊಲೀಸ್‌ರಿಂದ 332 ಅಫಿಡವಿಟ್, ಸಾರ್ವಜನಿಕರಿಂದ 139 ಅಫಿಡವಿಟ್‌ಗಳು ಸಲ್ಲಿಕೆಯಾಗಿದ್ದವು, ಮಾಧ್ಯಮದ ಐವರು ಹೇಳಿಕೆಗಳನ್ನಷ್ಟೇ ದಾಖಲಿಸಿದ್ದರು.

ಆಯೋಗದ ಮುಂದೆ 103 ಅಡ್ವೋಕೇಟ್‌ಗಳು, 158 ಪೊಲೀಸರು , 14 ಸಾರ್ವಜನಿಕರು ಮತ್ತು ಓರ್ವ ಅಧಿಕಾರಿ ಸಾಕ್ಷ್ಯ ನುಡಿದರು. ಅಲ್ಲದೆ, ಆಯೋಗದ ಮುಂದೆ ಅಡ್ವೋಕೇಟರ್‌ಗಳು 349 ಸಾಕ್ಷ್ಯಗಳು, ಪೊಲೀಸರು 251 ಸಾಕ್ಷ್ಯಗಳು, ಸರ್ಕಾರದಿಂದ 12 ಸಾಕ್ಷ್ಯಗಳು ಹಾಗೂ ಸಾರ್ವಜನಿಕರಿಂದ 15 ಸಾಕ್ಷ್ಯಗಳು ಆಯೋಗಕ್ಕೆ ಸಲ್ಲಿಸಲಾಗಿತ್ತು ಎಂದು ಆಯೋಗದ ಕಾರ್ಯದರ್ಶಿಗಳು ತಿಳಿಸಿದ್ದಾರೆ.

ಬಾಬು:ಜಿಪಿಆರ್.

## ಬ್ಯೂಟಿಷಿಯನ್ ಕೋರ್ಸ್ ತರಬೇತಿ

**ಬೆಂಗಳೂರು, ಫೆಬ್ರವರಿ 27 (ಕರ್ನಾಟಕ ವಾರ್ತೆ)**

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು ಯುವತಿಯರಿಗಾಗಿ ಸ್ವಯಂ ಉದ್ಯೋಗ ಒದಗಿಸಿಕೊಡುವ ನಿಟ್ಟಿನಲ್ಲಿ 'ಬ್ಯೂಟಿಷಿಯನ್ ಕೋರ್ಸ್' ಉಚಿತ ತರಬೇತಿ ಶಿಬಿರವನ್ನು ದಿನಾಂಕ 09-03-2015 ರಿಂದ 24-03-2015 ರವರೆಗೆ ಬೆಂಗಳೂರಿನ ನೃಪತುಂಗ ರಸ್ತೆಯಲ್ಲಿರುವ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ರಾಜ್ಯ ಯುವ ಕೇಂದ್ರದಲ್ಲಿ ಏರ್ಪಡಿಸಲಾಗಿದೆ.

ಈ ತರಬೇತಿ ಶಿಬಿರವು 15 ದಿನಗಳ ಕಾಲ ನಡೆಯುತ್ತದೆ. ತರಬೇತಿಯು ಮಧ್ಯಾಹ್ನ 2-00 ಗಂಟೆಯಿಂದ ಸಂಜೆ 5-30 ಗಂಟೆಯವರೆಗೆ ನಡೆಯುತ್ತದೆ. ವಯೋಮಾನ 15 ರಿಂದ 35 ವರ್ಷದೊಳಗಿನ ಯುವತಿಯರು ಭಾಗವಹಿಸಲು ಅರ್ಹರು. ಬ್ಯೂಟಿಷಿಯನ್ ಕೋರ್ಸ್‌ನ ಬಗ್ಗೆ ಎಲ್ಲಾ ರೀತಿಯಲ್ಲಿ ತರಬೇತಿ ನೀಡಲಾಗುವುದು. ಪ್ರವೇಶ ಉಚಿತವಾಗಿರುತ್ತದೆ. ಆಸಕ್ತ ಯುವತಿಯರು ದಿನಾಂಕ : 05-03-2015 ರ ಒಳಗಾಗಿ ಸಹಾಯಕ ನಿರ್ದೇಶಕರು, ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು. ಇವರಲ್ಲಿ ಹೆಸರನ್ನು ನೋಂದಾಯಿಸಿಕೊಳ್ಳಬಹುದು.

ಹೆಚ್ಚಿನ ವಿವರಗಳಿಗಾಗಿ ದೂರವಾಣಿ ಸಂಖ್ಯೆ: 080-22214911 ಸಂಪರ್ಕಿಸಬಹುದಾಗಿದೆ ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ನಿರ್ದೇಶನಾಲಯದ ಪ್ರಕಟಣೆ ತಿಳಿಸಿದೆ.

ಬಾಬು:ಜಿಪಿಆರ್.

## ಮೊಬೈಲ್‌ನಲ್ಲಿ ವಚನ, ದಾಸ ಸಾಹಿತ್ಯ

**ಬೆಂಗಳೂರು, ಫೆಬ್ರವರಿ 26 (ಕರ್ನಾಟಕ ವಾರ್ತೆ)**

ವಚನ ಸಾಹಿತ್ಯ ಕರ್ನಾಟಕದ ಬಹುದೊಡ್ಡ ಸಾಂಸ್ಕೃತಿಕ ಸಂಪತ್ತು. 12ನೆಯ ಶತಮಾನದಲ್ಲಿ ನಡೆದ ಸಾಮಾಜಿಕ, ಧಾರ್ಮಿಕ ಚಳವಳಿಯ ಫಲವಾಗಿ ಅಭಿವ್ಯಕ್ತಿಗೊಂಡ ಈ ವಚನಸಾಹಿತ್ಯವು ಸಮಾಜದ ಎಲ್ಲ ವರ್ಗಗಳ ವಿಚಾರ, ಚಿಂತನೆಗಳ ಫಲವಾಗಿದೆ. ಕನ್ನಡ ಭಾಷಿಕಶಕ್ತಿಯ ವಿವಿಧ ಆಯಾಮಗಳನ್ನು; ಸಾಹಿತ್ಯ ಸಂಗೀತದ ಸಾಮರಸ್ಯವನ್ನು ಮೆರೆದಿರುವ ದಾಸ ಸಾಹಿತ್ಯವು ಕನ್ನಡ ಸಾಹಿತ್ಯಕ್ಕೆ ಜಾಗತಿಕ ಮಹತ್ವವನ್ನು ತಂದುಕೊಟ್ಟಿದೆ.

ಇಂತಹ ಅಪಾರ ಹಾಗೂ ವೈವಿಧ್ಯಮಯವಾದ ಸಮಗ್ರ ವಚನ ಹಾಗೂ ದಾಸ ಸಾಹಿತ್ಯದ ಯೋಜನೆಯಲ್ಲಿ ಸುಮಾರು 249 ಜನ ವಚನಕಾರರ, ಸುಮಾರು 21,674 ವಚನಗಳನ್ನು

ಸಂಗ್ರಹಿಸಲಾಗಿದೆ. ಸಮಗ್ರ ದಾಸ ಸಾಹಿತ್ಯದ 142ದಾಸರ ಸುಮಾರು 16,337 ಕೀರ್ತನೆಗಳನ್ನು ಸಂಗ್ರಹಿಸಲಾಗಿದೆ. ಇವುಗಳಿಂದ ಆಯ್ದ 500 ಕೀರ್ತನೆಗಳನ್ನು ಮತ್ತು ಆಯ್ದ 1000 ವಚನಗಳನ್ನು ವಿವಿಧ ಧಾಟಿಗಳಲ್ಲಿ ರಾಗ ಸಂಯೋಜಿಸಿ, ನಾಡಿನ ಹೆಸರಾಂತ ಗಾಯಕರಿಂದ ಹಾಡಿಸಿ, ಧ್ವನಿ ಮುದ್ರಿಸಿ ಅಂತರ್ಜಾಲಕ್ಕೆ ಅಳವಡಿಸಿರುವ ಮಾಹಿತಿಯನ್ನು ಪರಿಷ್ಕರಿಸಿ ಬಿಡುಗಡೆ ಮಾಡಲಾಗುತ್ತಿದೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಪ್ರಕಟಿಸುತ್ತಿರುವ ಎಲ್ಲಾ ಪುಸ್ತಕಗಳನ್ನು ಮೊಬೈಲ್‌ನಲ್ಲಿ News Hunt App ಮೂಲಕ ಇ-ಬುಕ್ ಮಾದರಿಯಲ್ಲಿ ಮೊಬೈಲ್‌ನಲ್ಲಿ ಮತ್ತು ವಿಕಿಪಿಡಿಯಾದಲ್ಲೂ ಅಳವಡಿಸಿ ಓದುಗರಿಗೆ ಉಚಿತವಾಗಿ ಕನ್ನಡ ಸಾಹಿತ್ಯವನ್ನು ಒದಗಿಸಲಾಗುತ್ತಿದ್ದು, ದಿನಾಂಕ:01.03.2015ರಂದು ಸಂಜೆ 6.00 ಗಂಟೆಗೆ ಮಾನ್ಯ ಮುಖ್ಯಮಂತ್ರಿಯವರ ಗೃಹ ಕಚೇರಿ 'ಕೃಷ್ಣಾ'ದಲ್ಲಿ ಸಮಗ್ರ ವಚನ ಮತ್ತು ದಾಸ ಸಾಹಿತ್ಯದ ಪರಿಷ್ಕೃತ ವೆಬ್‌ಸೈಟ್, ಮೊಬೈಲ್‌ನಲ್ಲಿ ಪುಸ್ತಕಗಳ ಓದು (ಇ-ಬುಕ್), ವಿಕಿಪಿಡಿಯಾದಲ್ಲಿ ಇಲಾಖಾ ಪ್ರಕಟಣೆಗಳ ಅಳವಡಿಕೆ ಹಾಗೂ ಇಲಾಖೆಯ ಪುಸ್ತಕಗಳ ಲೋಕಾರ್ಪಣೆಯನ್ನು ಮಾನ್ಯ ಮುಖ್ಯಮಂತ್ರಿಗಳು ನೆರವೇರಿಸಲಿದ್ದಾರೆ. ಈ ಸಂದರ್ಭದಲ್ಲಿ ಇಲಾಖೆಯ ಮಾನ್ಯ ಸಚಿವರಾದ ಶ್ರೀಮತಿ ಉಮಾಶ್ರೀಯವರು ಉಪಸ್ಥಿತರಿರುತ್ತಾರೆ.

**ಸಮಗ್ರ ವಚನ ಮತ್ತು ದಾಸ ಸಾಹಿತ್ಯದ ಮಾಹಿತಿಯನ್ನು kannadasiri.org ಮೂಲಕ, ಮೊಬೈಲ್‌ನಲ್ಲಿ News Hunt App ನ್ನು ಡೌನ್ ಲೋಡ್ ಮಾಡಿಕೊಂಡು Newshunt Ebooks ಮೂಲಕ ಮತ್ತು ವಿಕಿಪಿಡಿಯಾದಲ್ಲಿ bitlly.com/gokbooks ಮೂಲಕ ಇಲಾಖೆಯ ಪುಸ್ತಕಗಳನ್ನು ಉಚಿತವಾಗಿ ಓದಬಹುದಾಗಿರುತ್ತದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರಕಟಣೆ ತಿಳಿಸಿದೆ.**
**ಬಾಬು/ಕೆಎಂ**

# ಫಲಿತಾಂಶ

**ಬೆಂಗಳೂರು, ಫೆಬ್ರವರಿ 26 (ಕರ್ನಾಟಕ ವಾರ್ತೆ)**

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯು ಫೆಬ್ರವರಿ-2015 ರ ಮಾಹೆಯಲ್ಲಿ ನಡೆಸಿದ ಕರ್ನಾಟಕ ಮುಕ್ತ ಶಾಲೆ ಕೆ.ಓ.ಎಸ್. ಪರೀಕ್ಷೆಯ ಫಲಿತಾಂಶವನ್ನು ದಿನಾಂಕ 2-3-2015 ರಂದು ಬೆಳಿಗ್ಗೆ 11-00 ಗಂಟೆಗೆ ರಾಜ್ಯದ ಎಲ್ಲಾ ಕಲಿಕಾ ಕೇಂದ್ರಗಳಲ್ಲಿ ಪ್ರಕಟಿಸಲು ಕರ್ನಾಟಕ ಮುಕ್ತ ಶಾಲೆ-ಕೆ.ಓ.ಎಸ್. ಕಲಿಕಾ ಕೇಂದ್ರಗಳ ಸಮನ್ವಯಾಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ನಿರ್ದೇಶಕರು (ಇತರೆ ಪರೀಕ್ಷೆಗಳು) ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ ಬೆಂಗಳೂರು ಇವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.
ಪಹೊ/ಕೆಎಂ

# ವಾರ್ತಾ ಸಚಿವರ ಪ್ರವಾಸ

**ಬೆಂಗಳೂರು, ಫೆಬ್ರವರಿ 26 (ಕರ್ನಾಟಕ ವಾರ್ತೆ)**

ಮೂಲ ಸೌಲಭ್ಯ ಅಭಿವೃದ್ಧಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಹಾಗೂ ಹಜ್ ಸಚಿವ ಶ್ರೀ ಆರ್. ರೋಷನ್ ಬೇಗ್ ಅವರು ಫೆಬ್ರವರಿ 28 ಮೈಸೂರಿಗೆ ಪ್ರಯಾಣ ಮಾಡಿ 2012 ಮತ್ತು 2013 ನೇ ಸಾಲಿನಲ್ಲಿ ರಾಜ್ಯ ಚಲನಚಿತ್ರ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಭಾಗವಹಿಸಿ ಮಾರ್ಚ್ 1 ರಂದು ಕೇಂದ್ರಸ್ಥಾನಕ್ಕೆ ಹಿಂದಿರುಗುವರು.

ಪಹೊ/ಕೆಎಂ